ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿ ಸಿ 22/2019

| | | |
|---|---|---|
| ಹೆಸರು | : | ಸೋಮಶೇಖರ |
| ತಂದೆಯ ಹೆಸರು | : | ಪಳನಿ |
| ವಯಸ್ಸು | : | 35 ವರ್ಷ |
| ವೃತ್ತಿ | : | ಗ್ರಾಮ ಪಂಚಾಯಿತಿ ಸಹಾಯಕ |
| ವಾಸ | : | ಕ್ಯಾತನಹಳ್ಳಿ ಗ್ರಾಮ |

ದಿನಾಂಕ:24.12.2021 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಸರ್ಕಾರಿ ಪರ ಅಭಿಯೋಜಕರಿಂದ ಸಾಕ್ಷಿಯ ಮುಖ್ಯ ವಿಚಾರಣೆ:

1. ಸುಮಾರು 2 ವರೆ ವರ್ಷಗಳ ಹಿಂದೆ ಸಾಯಂಕಾಲ 7.00 ಗಂಟೆ ಸುಮಾರಿಗೆ ನಮ್ಮ ಊರಾದ ಕ್ಯಾತನಹಳ್ಳಿ ಗ್ರಾಮದಿಂದ ರೈಲ್ವೆ ಸ್ಟೇಷನ್ ಕಡೆಗೆ ನಾನು ಮತ್ತು ನಮ್ಮ ಊರಿನವರಾದ ಚಾಸಾ: 2 ಮಹದೇವ್ ಇಬ್ಬರೂ ಸೇರಿ ನನ್ನ ಮಾಲ್ಕೀ ದ್ವಿಚಕ್ರ ವಾಹನದ ಮೇಲೆ ಹೊರಟಿದ್ದೆವು. ನನ್ನ ವಾಹನಕ್ಕೆ ಪೆಟ್ರೋಲ್ ತುಂಬಿಸಿಕೊಳ್ಳಲು ಹೊರಟಿದ್ದೆವು. ಆ ಸಮಯಕ್ಕೆ ಕಡತನಾಳು ಡಾಬಾ ಹತ್ತಿರ ಜನ ಸೇರಿದ್ದರು. ನಾವು ಹೋಗಿ ನೋಡಲಾಗಿ, ರಸ್ತೆ ಅಪಘಾತವಾಗಿದ್ದು ಕಂಡು ಬಂತು. ಅಪಘಾತದಲ್ಲಿ ಗಾಯಗೊಂಡು ಸ್ಥಳದಲ್ಲೇ ಮರಣ ಹೊಂದಿದ ವ್ಯಕ್ತಿಯನ್ನು ನಾವು ನೋಡಿದಾಗ ನಮ್ಮ ಊರಿನ ರವಿ ಕುಮಾರ ಅಂತ ಗೊತ್ತಾಯಿತು. ತಮಿಳುನಾಡಿನ ಲಾರಿಗೂ

ಮತ್ತು ರವಿ ಕುಮಾರ್ ನಡೆಸುತ್ತಿದ್ದ ದ್ವಿಚಕ್ರ ವಾಹನದ ನಡುವೆ ಅಪಘಾತವಾಗಿತ್ತು ಅಂತ ನಮಗೆ ತಿಳಿಯಿತು. ನಾವು ಹೋಗಿ ನೋಡುವಷ್ಟರಲ್ಲಿ ಅಪಘಾತ ಆಗಿತ್ತು. ಅಪಘಾತ ಯಾರ ತಪ್ಪಿನಿಂದ ಆಗಿದೆ ಅಂತ ನನಗೆ ಹೇಳಲು ಗೊತ್ತಿಲ್ಲ. ಆರೋಪಿತರ ಪೆಟ್ಟಿಯಲ್ಲಿರುವ ಆರೋಪಿತನನ್ನು ನಾನು ಈಗ ನೋಡುತ್ತಿದ್ದು ನನಗೆ ಗುರುತಿಸಲಾಗುವುದಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಪಘಾತವನ್ನು ಕಣ್ಣಾರೆ ನೋಡಿರುತ್ತೇನೆ ಅಂತ ನಾನು ಯಾವುದೇ ಪೋಲೀಸ್ ಪಿರ್ಯಾದಿ ಕೊಟ್ಟಿಲ್ಲ. ಅಪಘಾತದ ಸ್ಥಳವನ್ನು ಪೋಲೀಸರಿಗೆ ತೋರಿಸಿದ ಬಗ್ಗೆ ಮತ್ತು ಸ್ಥಳ ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ಸಹಿಗಳನ್ನು ನೋಡುತ್ತಿದ್ದು, ಎರಡೂ ಸಹಿಗಳು ನನ್ನ ಸಹಿಗಳು ಇರುತ್ತವೆ. **(ದಿನಾಂಕಃ 21.11.2018 ರ ಪಿರ್ಯಾದಿಯಲ್ಲಿರುವ ಸಹಿಯನ್ನು ಮತ್ತು ಸ್ಥಳ ಪಂಚನಾಮೆಯಲ್ಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿಕೊಂಡಿದ್ದು, ಪಿರ್ಯಾದಿಯನ್ನು ನಿಪಿಃ 1 ಅಂತ ಪಿರ್ಯಾದಿಯಲ್ಲಿಯ ಸಹಿಯನ್ನು ನಿಪಿಃ1(ಎ) ಅಂತ, ಸ್ಥಳ ಪಂಚನಾಮೆಯನ್ನು ನಿಪಿಃ 2 ಅಂತ ಅದರಲ್ಲಿಯ ಸಹಿಯನ್ನು ನಿಪಿಃ 2(ಎ) ಅಂತ ಗುರುತಿಸಲಾಯಿತು)** ಈಗ ನನಗೆ ತೋರಿಸುತ್ತಿರುವ ಪೋಟೋಗಳಲ್ಲಿ ಪೋಲೀಸರ ಜೊತೆ ನಾನೂ ಸಹಿತ ಇರುತ್ತೇನೆ. **(ಎರಡೂ ಪೋಟೋಗಳನ್ನು ಕ್ರಮವಾಗಿ ನಿಪಿಃ 3 ಮತ್ತು 4 ಅಂತ ಗುರುತಿಸಲಾಯಿತು)**

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಮಾಡಿಕೊಂಡಬೇಕು ಅಂತ ಸರ್ಕಾರಿ ಪರ ಅಭಿಯೋಜಕರು ಪ್ರಾರ್ಥಿಸಿರುತ್ತಾರೆ. ಆಲಿಸಲಾಯಿತು ಮತ್ತು ಪ್ರಕರಣವನ್ನು ಪರಿಶೀಲನೆ ಮಾಡಲಾಯಿತು. ಪ್ರಸ್ತುತ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.

<u>ಸರ್ಕಾರಿ ಅಭಿಯೋಜಕರಿಂದ ಸಾಕ್ಷಿಯ ಪಾಟೀ ಸವಾಲು :</u>

2. ನಿಪಿ:1 ರಲ್ಲಿ ಬರೆದಿರುವ ಅಂಶಗಳನ್ನು ನಾನು ಓದಿಸಿ ತಿಳಿದುಕೊಂಡೆನು. ದಿನಾಂಕ: 20.11.2018 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ: 2 ನಮ್ಮ ಕೆಲಸದ ನಿಮಿತ್ತ ರೈಲ್ವೆ ನಿಲ್ದಾಣಕ್ಕೆ ಹೋಗುವಾಗ ಮೈಸೂರು ಮುಖ್ಯ ರಸ್ತೆಯಲ್ಲಿ ಕಡತನಾಳು ಗ್ರಾಮದ ಹತ್ತಿರ ಇರುವ ವಿಶ್ರಾಂತಿ ಡಾಬಾ ದ ಎದುರಿಗೆ ನಮ್ಮ ಊರಿನ ರವಿಕುಮಾರ್ ಬೈಕ್ ನಲ್ಲಿ ಎಡಭಾಗದಲ್ಲಿ ಹೋಗುತ್ತಿದ್ದಾಗ ಆತನ ಹಿಂಭಾಗದಿಂದ, ನ್ಯಾಯಾಲಯದ ಮುಂದಿರುವ ಆರೋಪಿ ತನ್ನ ಲಾರಿ ಟಿಎನ್-33-ಎಯು- 4907 ಇದನ್ನು ಅತಿ ಜೋರಾಗಿ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ಪಕ್ಕದಲ್ಲಿ ಹೊರಟಿದ್ದ ಬೈಕ್ ಚಾಲಕ ರವಿಕುಮಾರ್ ಇವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಬೈಕ್ ಚಾಲಕ ಕೆಳಗೆ ಬಿದ್ದುದರಿಂದ ಅವನ ತಲೆಯ ಮೇಲೆ ಸದರಿ ಲಾರಿಯ ಚಕ್ರ ಹರಿದಿದ್ದರಿಂದ, ರವಿ ಕುಮಾರ್ ಈತನು ಸ್ಥಳದಲೇ ಮೃತಪಟ್ಟನು. ಸದರಿ ಬೈಕ್ ಸಂಪೂರ್ಣ ಜಕಂ

ಗೊಂಡಿದ್ದು ನಂತರ ನಾವು ಮೃತ ವ್ಯಕ್ತಿಯನ್ನು ಗುರುತಿಸಿ ತರುವಾಯ ಮೃತ ವ್ಯಕ್ತಿಯನ್ನು ಶ್ರೀರಂಗಪಟ್ಟಣ ಆಸ್ಪತ್ರೆಗೆ ಸಾಗಿಸಿದೆವು ಅಂತ ಪಿರ್ಯಾದಿ ಕೊಟ್ಟಿರುತ್ತೇನೆ ಅನ್ನುವುದು ಸರಿಯಲ್ಲ.ಪ್ರಸ್ತುತ ಅಪಘಾತ ಈಗ ನ್ಯಾಯಾಲಯದ ಮುಂದಿರುವಂತಹ ಆರೋಪಿತನ ತಪ್ಪಿನಿಂದ ಆಗಿದೆ ಅಂತ ನಿಶಾನೆ ಪಿ - 1 ರಂತೆ ಪಿರ್ಯಾದಿ ಕೊಟ್ಟಿರುತ್ತೇನೆ ಅನುವುದು ಸರಿಯಲ್ಲ.

3. ನಿಪಿಃ 2 ರ ಸಂಗತಿಗಳನ್ನು ಓದಿ ಹೇಳಿದ್ದು ಕೇಳಿಸಿಕೊಂಡೆನು. ನಿಪಿಃ2 ರಂತೆ ದಿನಾಂಕಃ 20.11.2018 ರಂದು ನಾನು ಪೋಲೀಸರಿಗೆ ಸಿಡಬ್ಲೂ ೱ 8 ಚಂದ್ರ ಮತ್ತು ಸಿಡಬ್ಲೂ ೱ 9 ಲೋಕೇಶ ಇವರ ಸಮಕ್ಷಮ ಅಪಘಾತದ ಸ್ಥಳವನ್ನು ತೋರಿಸಿದ್ದು ಆ ಪ್ರಕಾರ ಪೋಲೀಸರು ಸದರಿ ದಿವಸ 11.45 ರಿಂದ 12.45 ಗಂಟೆಯ ಅವಧಿಯ ನಡುವೆ ಸ್ಥಳ ಮಹಜರ್ ಮಾಡಿರುತ್ತಾರೆ ಮತ್ತು ಸ್ಥಳದಲ್ಲಿ ನಾನು ಸಹಿ ಮಾಡಿರುತ್ತೇನೆ ಅನ್ನುವುದು ಸರಿಯಲ್ಲ. ನಿಪಿಃ 3 ಮತ್ತು 4 ರ ಪೋಟೋಗಳಲ್ಲಿ ಇರುವಂತೆ ನಾನೇ ಪೋಲೀಸರಿಗೆ ಅಪಘಾತದ ಸ್ಥಳವನ್ನು ತೋರಿಸಿದ್ದರೂ ಸಹಿತ ನನಗೆ ಏನೊಂದೂ ಗೊತ್ತಿಲ್ಲ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ನಿಪಿಃ1 ರಂತೆ ನಾನು ಪಿರ್ಯಾದಿ ಸಹಿತ ಕೊಟ್ಟಿದ್ದರೂ ಅಲ್ಲದೇ ಅಪಘಾತವನ್ನು ನಾನು ಕಣ್ಣಾರೆ ನೋಡಿದ್ದರೂ ಸಹಿತ ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಈ ಅಪಘಾತವು ಈಗ ನ್ಯಾಯಾಲಯದ ಮುಂದಿರುವಂತಹ ಆರೋಪಿತನ ತಪ್ಪಿನಿಂದ

ಆಗಿದೆ ಅಂತ ನನಗೆ ಗೊತ್ತಿದ್ದರೂ ಸಹಿತ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ನಿಪಿ፡1 ರಲ್ಲಿಯ ಅಂಶಗಳನ್ನು ಪೋಲೀಸರಿಗೆ ನಾನೇ ಹೇಳಿ ಬರೆಸಿ ಸರಿ ಇದೆ ಅಂತ ಸಹಿ ಮಾಡಿದ್ದರೂ ಸಹಿತ ನನಗೆ ಏನೊಂದೂ ಗೊತ್ತಿಲ್ಲ ಮತ್ತು ಪೋಲೀಸರು ಹೇಳಿದ್ದಕ್ಕಾಗಿ ಸಹಿ ಮಾಡಿರುತ್ತೇನೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

ಮರು ಪಾಟೀ ಸವಾಲು ಇರುವುದಿಲ್ಲ.

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇರುವುದಿಲ್ಲ ಅಂತ ನಿವೇದಿಸಿರುತ್ತಾರೆ.

**(ನನ್ನ ಉಖ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸಾ.ಸ.ಒ.ಇದೆ.**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ,ಶ್ರೀರಂಗಪಟ್ಟಣ